**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 353/2017** **CW**– 2 **PW**–2

**ಸಾಕ್ಷಿಯನ್ನು ದಿಃ 26.11.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ನಾಗರಾಜ್ ಕೆ |
| ತಂದೆಯ ಹೆಸರುಃ | ಕೃಷ್ಣೇಗೌಡ |
| ವಯಸ್ಸುಃ | 59 ವರ್ಷ |
| ವೃತ್ತಿಃ | ಪ್ರಾಂಶುಪಾಲರು, ಆದಿ ಚುಂಚನಗಿರಿ ಪಿ.ಯು.ಕಾಲೇಜ್ |
| ವಾಸ ಸ್ಥಳಃ | ಹಿರೀಸಾವೆ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಆದಿಚುಂಚನಗಿರಿ ಪಿ.ಯು.ಕಾಲೇಜ್ ನಲ್ಲಿ 1992 ರಿಂದ 2003 ರ ವರೆಗೆ ಉಪನ್ಯಾಸಕರಾಗಿ 2003 ರಿಂದ ಇಲ್ಲಿಯವರೆಗೆ ಪಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 4–03–2016 ರಂದು ನಮ್ಮ ಕಾಲೇಜಿನಲ್ಲಿ ದ್ವಿತೀಯ ಪಿ.ಯು.ಸಿ ಸಮಾಜಶಾಸ್ತ್ರ ಪರೀಕ್ಷೆ ನಡೆಯುತ್ತಿದ್ದು ನಾನು ಕೊಠಡಿ ಸಂಖ್ಯೆ 3 ರ ಮೇಲ್ವಿಚಾರಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ ಆಗಿ ನಂ.475622, 475654 ಸಂಖ್ಯೆಯ ವಿದ್ಯಾರ್ಥಿಯ ಜಾಗದಲ್ಲಿ ಅಸಲಿ ವಿದ್ಯಾರ್ಥಿಯ ಜಾಗದಲ್ಲಿ ಬೇರೆ ವಿದ್ಯಾರ್ಥಗಳು ಪರೀಕ್ಷೆ ಬರೆಯುತ್ತಿರುವುದು ನನ್ನಗೆ ಬೆಳಗ್ಗೆ 10.30 ಗಂಟೆಗೆ ಕಂಡುಬಂದಿರುತ್ತದೆ. ನಾನು ಆಗ ಈ ಮಾಹಿತಿಯನ್ನು ಚಾಸಾ–1 ರವರಿಗೆ ತಿಳಿಸಿರುತ್ತೇನೆ. ಆಗ ಚಾಸಾ–3 ರಿಂದ 7 ರವರು ಸ್ಥಳಕ್ಕೆ ಬಂದು, ಪರಿಶೀಲಿಸಿ ಸದರಿ ವಿದ್ಯಾರ್ಥಿಗಳನ್ನು ಪರಿಶೀಲಿಸಿದಾಗ ನಂ.475622 ರ ಜಾಗದಲ್ಲಿ ಕಿರಣ್ ಎಂಬ ವಿದ್ಯಾರ್ಥಿಯ ಬದಲು ಶಶಿಧರ್ ಎಂಬ ವಿದ್ಯಾರ್ಥಿ ಹಾಗೂ ನಂ. 475654 ರ ಜಾಗದಲ್ಲಿ ಮಹೇಶ್ ಎಂಬ ವಿದ್ಯಾರ್ಥಿಯ ಬದಲು ಅಭಿಷೇಕ ಎಂಬ ವಿದ್ಯಾರ್ಥಿ ಪರೀಕ್ಷೆ ಬರೆಯುತ್ತಿರುವುದು ಕಂಡುಬಂದಿರುತ್ತದೆ. ಸದರಿ ವಿದ್ಯಾರ್ಥಿಗಳಲ್ಲಿ ನಕಲಿ ಗುರುತಿನ ಚೀಟಿಗಳು ಕಂಡುಬಂದಿರುತ್ತದೆ. ಅವರ ಹೆಸರು ಮತ್ತು ವಿಳಾಸವನ್ನು ನಮ್ಮ ರಿಜಿಸ್ಟರಿನಲ್ಲಿ ನಮೂದಿಸಿಕೊಂಡು ಆ ವಿದ್ಯಾರ್ಥಿಗಳನ್ನು ಪೊಲೀಸರಿಗೆ ಪೋಲೀಸರ ಸುಪರ್ದಿಗೆ ನೀಡಿರುತ್ತೇವೆ. ಸಾಕ್ಷಿ ನಿಶಾನೆ 6 ಮತ್ತು 7 ರ ನಕಲಿ ಗುರುತಿನ ಚೀಟಿಯನ್ನು

ನೋಡಿ ಗುರುತಿಸಿದ್ದು ಸಾಕ್ಷಿಯ ಚಿಕ್ಕ ಸಹಿಗಳನ್ನು ನಿಪಿ–6(ಎ) ಮತ್ತು ನಿಪಿ–7(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ–9 ಮತ್ತು 10 ರ ದಾಖಲೆಗಳನ್ನು ಗುರುತಿಸಿದ್ದು ಅದರಲ್ಲಿರುವ ಸಹಿಗಳನ್ನು ನಿಪಿ.9(ಎ) ಮತ್ತು ನಿಪಿ.10(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ಯು 1 ಮತ್ತು 2 ನೇ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ .

**ಪಾಟೀ ಸವಾಲುಃ 1 ಮತ್ತು 2ನೇ ಆರೋಪಿಗಳ ಪರ ಶ್ರೀ ಸಿ.ಎಸ್.ಡಿ ವಕೀಲರಿಂದಃ**

ಅ ದಿನ ಪರೀಕ್ಷೆ ಬೆಳಗ್ಗೆ 10–00 ಗಂಟೆಗೆ ಪ್ರಾರಂಭವಾಗಿರುತ್ತದೆ. ನಾನು ಕೊಠಡಿಗೆ 9–50 ಗಂಟೆಗೆ ಹೋಗಿರುತ್ತೇನೆ. ಆ ದಿನ ಕೊಠಡಿಯಲ್ಲಿ ಸುಮಾರು 27 ಜನ ವಿದ್ಯಾರ್ಥಿಗಳು ಪರೀಕ್ಷೆ ಬರೆದಿರುತ್ತಾರೆ. ಗೈರು ಹಾಜರಾದ ವಿದ್ಯಾರ್ಥಿಗಳ ಹೆಸರು ನೆನಪಿಲ್ಲ. ಪ್ರಶ್ನೆ ಪತ್ರಿಕೆ ನೀಡುವ ಮೊದಲೇ ಎಲ್ಲಾ ವಿದ್ಯಾರ್ಥಿಗಳನ್ನು ನಾನು ಪರಿಶೀಲಿಸಿದ್ದೆ. ನನಗೆ ಆಗ ಯಾವುದೇ ಅನುಮಾನ ಕಂಡುಬಂದಿಲ್ಲ ಎಂದರೆ ಸರಿ. ನಂತರ ಸಮಯ 10–30 10–45 ರ ಸಮಯದಲ್ಲಿ ಪರಿಶೀಲಿಸಿದಾಗ ನಕಲಿ ಎಂದು ಕಂಡುಬಂದಿರುತ್ತದೆ. ಚಾಸಾ –1 ರವರು ಸಹಾ ಕೊಠಡಿಗೆ ಬೆಳಗ್ಗೆ 10–30ಕ್ಕೆ ಬಂದಿರುತ್ತಾರೆ. ಅನುಮಾನ ಬಂದ ಎಲ್ಲಾ ವಿದ್ಯಾರ್ಥಿಗಳನ್ನು ಪರಿಶೀಲಿಸಿರುತ್ತೇನೆ ಅದರಲ್ಲಿ 1 ಮತ್ತು 2 ನೇ ಅರೋಪಿತರು ನಕಲಿ ಎಂದು ತಿಳಿದುಬಂದಿತು. 1 ಮತ್ತು 2 ನೇ ಅರೋಪಿತರ ಹೊಲಿಕೆ ಆ ದಿನ ನಾನು ಕೊಠಡಿಯಲ್ಲಿ ನೋಡಿದ ನಕಲಿ ವಿದ್ಯಾರ್ಥಿಗಳ ಹೋಲಿಕೆಯಂತೆಯೇ ಇದೆ. ಸದರಿ ವಿದ್ಯಾರ್ಥಿಗಳು ಆ ದಿನ ಕೊಠಡಿಯಲ್ಲಿ ಪರೀಕ್ಷೆ ಬರೆದಿಲ್ಲ ಎಂದರೆ ಸರಿ. ನಿಪಿ–6, ನಿಪಿ–7,ನಿಪಿ–9, ನಿಪಿ–10 ಅನ್ನು ಚಾಸಾ –1 ರವರು ವಶಪಡಿಸಿಕೊಂಡಿರುತ್ತಾರೆ. ಚಾಸಾ–1 ರವರೊಂದಿಗೆ ನಾನು ಸಹಾ ಮಧ್ಯಾನ 2–00 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿರುತ್ತೆನೆ. ಅದೇ ದಿನ ಮಧ್ಯಾನ 2–00 ಗಂಟೆಗೆ ಪೊಲೀಸರು ನನ್ನಿಂದ ಹೇಳಿಕೆ ಪಡೆದಿರುತ್ತಾರೆ. 1 ಮತ್ತು 2ನೇ ಆರೋಪಿ ಯಾವುದೇ ನಕಲಿ ವಿದ್ಯಾರ್ಥಿಗಳಂತೆ ಪರೀಕ್ಷೆ ಬರೆಯದಿದ್ದರು ಚಾಸಾ–1 ರವರು ದೂರು ನೀಡಿರುವಂತೆ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4ನೇ ಆರೋಪಿ ಪರ ಶ್ರೀಮತಿ ಎಸ್.ಡಿ.ಸಿ. ವಕೀಲರಿಂದಃ**

ಆ ಸಮಯದಲ್ಲಿ ನಾನು ಅರೋಪಿತರ ಹೆಸರು, ವಿಳಾಸವನ್ನು ಪಡೆದಿಲ್ಲ. ಪಡೆದಿರುವ ಬಗ್ಗೆ ನಾನು

ಹೇಳಿಕೆಯಲ್ಲಿ ಹೇಳಿರುವುದಿಲ್ಲ. 4ನೇ ಆರೋಪಿಗೆ 2ನೇ ಆರೊಪಿಯ ಪರಿಚಯ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಉಳಿದ ಪಾಟೀ ಸವಾಲು 1ನೇ ಮತ್ತು 2ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

**ಪಾಟೀ ಸವಾಲುಃ 3ನೇ ಆರೋಪಿ ಪರ ಶ್ರೀಮತಿ ಕೆ.ಸಿ.ಬಿ. ವಕೀಲರಿಂದಃ**

ಆ ದಿನ ಪರೀಕ್ಷೆಯನ್ನು 3ನೇ ಆರೋಪಿಯೇ ಬರೆದಿರುತ್ತಾರೆ ಎಂದರೆ ಸರಿಯಲ್ಲ. 1ನೇ ಆರೋಪಿಗೂ 3ನೇ ಆರೋಪಿಗೂ ಯಾವುದೇ ಪರಿಚಯ ಇಲ್ಲ ಎಂದರೆ ಸಾಕ್ಷಿ ಆ ದಿನ 3ನೇ ಆರೋಪಿಯ ಪರವಾಗಿ 1ನೇ ಆರೋಪಿ ಪರೀಕ್ಷೆ ಬರೆಯುತ್ತಿದ್ದರು ಎನ್ನುತ್ತಾರೆ. ಚಾಸಾ–1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಉಳಿದ ಪಾಟೀ ಸವಾಲು 1ನೇ ಮತ್ತು 2ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

**ಮರುವಿಚಾರಣೆ ಇಲ್ಲ.**

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ**).

**ಓ ಹೇ ಕೇ ಸರಿ ಇದೆ.**

**(ಶ್ರೀಮತಿ ಕುಸುಮ ವಿ.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ